# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | (423) 289 |
| 2 | ಸದಸ್ಯರ ಹೆಸರು | ಶ್ರೀ ಬಿ.ಕೆ.ಹರಿಪ್ರಸಾದ್ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 23.09.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಕಂದಾಯ ಭೂಮಿಗಳನ್ನು ರೀ-ಸರ್ವೆ ಮಾಡಿ ಎಷ್ಟು ವರ್ಷಗಳಾಗಿವೆ; | ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕಂದಾಯ ಭೂಮಿಗಳನ್ನು ಕೆಳಕಂಡ ವರ್ಷಗಳಲ್ಲಿ ರೀಸರ್ವೆ (ಮರುಭೂಮಾಪನ) ಮಾಡಲಾಗಿರುತ್ತದೆ<br><br>ಕ್ರ.ಸಂ / ಪ್ರಾಂತ್ಯ / ಅವಧಿ<br>1 / ಹಳೇ ಮೈಸೂರು ಪ್ರಾಂತ್ಯ / 1900-1917<br>2 / ಮುಂಬೈ ಪ್ರಾಂತ್ಯ / 1906-1921<br>3 / ಮದರಾಸು ಪ್ರಾಂತ್ಯ / 1923-1935<br>4 / ಹೈದರಾಬಾದ್ ಪ್ರಾಂತ್ಯ / 1906-1916<br>5 / ಕೊಡಗು ಪ್ರಾಂತ್ಯ / 1906-1912 |
| ಆ) | ಸಾಮಾನ್ಯವಾಗಿ ಎಷ್ಟು ವರ್ಷಗಳಿಗೊಮ್ಮೆ ರೀ ಸರ್ವೆ ಮಾಡ ಬೇಕಾಗಿದೆ; ರೀ-ಸರ್ವೆ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ; | ಕರ್ನಾಟಕ ಭೂಕಂದಾಯ ಅಧಿನಿಯಮ ಕಲಂ 115 ರಂತೆ ರಾಜ್ಯದಲ್ಲಿ ಪ್ರತಿ 30 ವರ್ಷಗಳಿಗೊಮ್ಮೆ ರೀ-ಸೆಟ್ಲಮೆಂಟ್ ಮಾಡಬೇಕಾಗಿರುತ್ತದೆ ಮತ್ತು ಸರ್ಕಾರವು ರಾಜ್ಯದಲ್ಲಿ ರೀ-ಸೆಟ್ಲಮೆಂಟ್/ರೀಸರ್ವೆ (ಮರುಭೂಮಾಪನ) ಮಾಡುವ ಉದ್ದೇಶ ಹೊಂದಿದೆ |
| ಇ) | ಪ್ರಸ್ತುತ ಯಾವುದಾದರೂ ತಾಲ್ಲೂಕುಗಳಲ್ಲಿ ರೀ-ಸರ್ವೆ ಕಾರ್ಯ ಮಾಡಲಾಗುತ್ತಿದೆಯೇ; | ಅತ್ಯಾಧುನಿಕ ತಂತ್ರಜ್ಞಾನವಾದ ಡ್ರೋಣ್ ಬಳಸಿ ಸರ್ವೆ ಆಫ್ ಇಂಡಿಯಾ ಸಂಸ್ಥೆಯ ಸಹಯೋಗದೊಂದಿಗೆ ರಾಜ್ಯದಲ್ಲಿ ಮರು ಭೂಮಾಪನ ಕೈಗೊಳ್ಳಲು ಸರ್ಕಾರ ನಿರ್ಧರಿಸಿದ್ದು, ಮೊದಲನೇ ಹಂತದಲ್ಲಿ 5 ಜಿಲ್ಲೆಗಳಲ್ಲಿ ಮತ್ತು ಎರಡನೇ ಹಂತದಲ್ಲಿ 8 ಜಿಲ್ಲೆಗಳಲ್ಲಿ ಮರುಭೂಮಾಪನ ಕಾರ್ಯ ಕೈಗೊಳ್ಳಲು ಸರ್ಕಾರ ಆದೇಶಿಸಿದೆ.<br>ಅದರಂತೆ ಪೂರ್ವಸಿದ್ಧತೆ ಕಾರ್ಯ ಪ್ರಾರಂಭಿಸಲಾಗಿದ್ದು, ಪ್ರಾಯೋಗಿಕವಾಗಿ ರಾಮನಗರ ಮತ್ತು ತುಮಕೂರು ಜಿಲ್ಲೆಗಳಲ್ಲಿ ಡ್ರೋನ್ ಸರ್ವೆ ಕಾರ್ಯವನ್ನು ಪ್ರಾರಂಭಿಸಿ, ಗ್ರೌಂಡ್ ಕಂಟ್ರೋಲ್ ಪಾಯಿಂಟ್.ಗಳನ್ನು ಸ್ಥಾಪಿಸಿದ್ದು, ಡ್ರೋನ್ Flying ಕಾರ್ಯವನ್ನು ಪ್ರಾರಂಭಿಸಲಾಗಿರುತ್ತದೆ<br>ಅದೇ ರೀತಿಯಾಗಿ ಹಂತ ಹಂತವಾಗಿ ರಾಜ್ಯದ ಉಳಿದ ಜಿಲ್ಲೆಗಳಲ್ಲಿಯೂ ಸಹಾ ಮರುಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ. ಈ ವೇಳೆಯಲ್ಲಿ ರಾಜ್ಯದ ಎಲ್ಲಾ ಜಮೀನುಗಳನ್ನು ವಿಸ್ತೃತವಾಗಿ ಅಳತೆ ಮಾಡಿ ದಾಖಲೆಗಳನ್ನು ತಯಾರಿಸಲು ಕ್ರಮ ಕೈಗೊಳ್ಳಲಾಗುವುದು |
| ಈ) | ರೀ-ಸರ್ವೆ ಮಾಡುವ ಉದ್ದೇಶ ಸರ್ಕಾರಕ್ಕಿದ್ದಲ್ಲಿ ಎಷ್ಟು ವರ್ಷಗಳಲ್ಲಿ ಮಾಡಿಸಲಾಗುವುದು? | |

**ಸಂಖ್ಯೆ: ಕಂಇ 124 ಎಸ್‌ಎಸ್‌ಸಿ 2020**

(ಆರ್.ಅಶೋಕ)
ಕಂದಾಯ ಸಚಿವರು